

ಡಾ.ವಿನೋದ ಛೆಬ್ಬಿ

**ತಲೆಗಳು ಹೆಚ್ಚಾದಷ್ಟೂ ತ್ರಿಕೋನೀಕರಣ ಹೆಚ್ಚು ವಿಷಮವಾಗುತ್ತದೆ!**

# 19: ಹಲವಾರು ತ್ರಿಕೋನಗಳು

ಹಲವಾರು ಸಂದರ್ಭಗಳಲ್ಲಿ ದಾಂಪತ್ಯದ ಭಾವಬಂಧವನ್ನು ಕಾಪಾಡಿಕೊಳ್ಳಲು ಮೂರನೆಯವರ ಸಹಾಯ ಕೋರುವ ಅಗತ್ಯ ಕಾರಣದಿಂದ ತ್ರಿಕೋನೀಕರಣದ ಉದಯವಾಗುತ್ತದಲ್ಲವೆ? ವಿಪರ್ಯಾಸವೆಂದರೆ ಮೂರನೆಯವರ ಪ್ರವೇಶದಿಂದ ಹೊಂದಾಣಿಕೆ ಇನ್ನೂ ಕಷ್ಟವಾಗುತ್ತದೆ! ಯಾಕೆ? ಒಬ್ಬರು ಮತ್ತೊಬ್ಬರನ್ನು ಬೆಂಬಲಿಸುತ್ತ ಇನ್ನೊಬ್ಬರನ್ನು ಹತ್ತಿಕ್ಕುವುದು, ಹಾಗೂ ಉಳಿದೊಬ್ಬರು ಇವರ ಯತ್ನವನ್ನು ವ್ಯರ್ಥಗೊಳಿಸುವುದು... ಇದು ಚಕ್ರಾಕಾರವಾಗಿ ನಡೆಯುತ್ತಿರುವಾಗ (ಪೀಡಿತ– ಪೀಡಕ– ರಕ್ಷಕರ ತ್ರಿಕೋನ ನೆನಪಿದೆಯೆ?) ಸಮಸ್ಯೆ ಬಗೆಹರಿಯುವುದು ಒತ್ತಟ್ಟಿಗಿರಲಿ, ಚಕ್ರ ಉರುಳಿಕೊಂಡು ಬೀದಿಗೆ ಇಳಿದೇಬಿಡುತ್ತದೆ. ಬೀದಿಯಲ್ಲೇ ಬಯ್ದಾಟ ಶುರು!

ಅಷ್ಟಾಗುವಾಗ ಇನ್ನೊಂದು ಪ್ರಕ್ರಿಯೆಯೂ ಕಾಲಿಡುತ್ತದೆ. ಸ್ವಲ್ಪ ಹೆಚ್ಚೇ ಸಮಾಜಮುಖಿ ಎನ್ನುವ ನಮ್ಮ ದಾಂಪತ್ಯಗಳಲ್ಲಿ ಗಂಡಹೆಂಡಿರ ಜಗಳ ಹೊರಗೆ ಕಂಡರೆ ಸಾಕು, ಬಂಧು ಬಳಗದವರೆಲ್ಲ ಮೂಗು ತೂರಿಸುತ್ತಾರೆ. ತಲೆಗೊಂದು ಉಪಾಯ ಸೂಚಿಸುತ್ತಾರೆ. ಕೆಲವೊಮ್ಮೆ ಸಂಬಂಧಪಟ್ಟವರು ಪಂಚಾಯತಿಗೆ ನೆರೆಯುವುದನ್ನು ನೀವು ನೋಡಬೇಕು– ಅಲ್ಲಿರುವ ಪ್ರತಿಯೊಬ್ಬರೂ ಸರ್ವಜ್ಞರಾಗಿ ಸಲಹೆ, ಉಪದೇಶ, ಬುದ್ಧಿವಾದ, ಹಿತವಚನ, ಪ್ರವಚನ... ಧಾರಾಳವಾಗಿ ಹರಿಸಿ ತಮ್ಮ ಮಾತು ಪಾಲಿಸಿದರೆ ಜಗಳವೇ ನಡೆಯಲಾರದು ಎಂಬಂತೆ ನಂಬಿಸಿಬಿಡುತ್ತಾರೆ. ಆಗ ತ್ರಿಕೋನೀಕರಣದ ಹಣೆಬರಹ ಏನಾಗುತ್ತದೆ? ಇದು ಬಹಳ ಕುತೂಹಲಕಾರಿ. ಇದನ್ನು ಈ ಕೆಳಗಿನ ದೃಷ್ಟಾಂತದ ಮೂಲಕ ಅರಿಯೋಣವಂತೆ.

ರಮಾ, ರಮೇಶ (ಎಲ್ಲರ ಹೆಸರುಗಳನ್ನೂ ಬದಲಿಸಲಾಗಿದೆ.) ಗಂಡ ಹೆಂಡತಿ. ವಿವಾಹ ವಿಚ್ಛೇದನಕ್ಕಾಗಿ ಅರ್ಜಿ ಸಲ್ಲಿಸಿದ್ದರೂ ಎರಡೂ ಕಡೆಯ ಜನ ಕೊನೆಯ ಪ್ರಯತ್ನವೆಂದು ಇವರಿಬ್ಬರನ್ನು ನನ್ನ ಬಳಿ ಹೆಚ್ಚುಕಡಿಮೆ ಎಳೆದುಕೊಂಡೇ ಕರೆತಂದಿದ್ದಾರೆ. ಇವರಿಬ್ಬರ ಕಥೆ?

ಹಿರಿಯರು ನಿಶ್ಚಯಿಸಿ, ಪರಸ್ಪರ ಒಪ್ಪಿ ಮದುವೆಯಾದ ಇವರ ನಡುವೆ ಮೊದಲಿನಿಂದಲೂ ಚಿಕ್ಕ ಪುಟ್ಟ ಮನಸ್ತಾಪಗಳಾಗುತ್ತಿವೆ. ಕೆಲವೊಮ್ಮೆ ರಮೇಶನ ಕೆಲಸದ ಒತ್ತಡ ತಲೆ ಕೆಡುವಂತೆ ಇರುವಾಗ ವಾರಾಂತ್ಯದಲ್ಲಿ ಕುಡಿಯುತ್ತಾನೆ. ಇದು ರಮಾಳಿಗೆ ಸರಿಬರುತ್ತಿಲ್ಲ. ಅವಳೆಷ್ಟೇ ಬುದ್ಧಿ ಹೇಳಿದರೂ ರಮೇಶ ಅದನ್ನು ಕಿವಿಯ ಮೇಲೆ ಹಾಕಿಕೊಳ್ಳುತ್ತಿಲ್ಲ (ಬೆನ್ನು ಬೀಳು–ಅಲಕ್ಷಿಸು). ಆದುದರಿಂದ ಅವಳು ಗಂಡನನ್ನು ಸ್ವಲ್ಪ ಕೀಳುದೃಷ್ಟಿಯಿಂದ ನೋಡುತ್ತಿದ್ದಾಳೆ. ಇದರಿಂದ ನೊಂದ ರಮೇಶ ಕುಡಿತವನ್ನು ಬಿಡಲು ಮನಸ್ಸು ಮಾಡುತ್ತಿಲ್ಲ. (ಕೀಳಾಗಿ ಕಾಣು– ವ್ಯಸನಕ್ಕೊಳಗಾಗು) ಇತ್ತೀಚೆಗೆ ರಮೇಶನ ಕೆಲಸದ ಒತ್ತಡ ಹೆಚ್ಚಾಗಿ ಅವನು ಸ್ವಲ್ಪ ಹೆಚ್ಚಿಗೆ ಕುಡಿಯುತ್ತಿದ್ದಾನೆ. ರಮಾ ತನ್ನ ದುಃಖವನ್ನು ನೆರೆಮನೆಯ ಭಾಮಾಳೊಂದಿಗೆ ಹಂಚಿಕೊಂಡಿದ್ದಾಳೆ. ಭಾಮಾ ಆಕೆಗೆ ಅನುಕಂಪ, ಸಹತಾಪ ತೋರಿಸಿದ್ದಾಳೆ. ಅಷ್ಟಲ್ಲದೆ ರಮೇಶನ (ಅವನು ಆಕೆಗೆ ರಾಖೀ ಬ್ರದರ್) ಬಗೆಗೆ ಅವಳಲ್ಲಿ ಕೀಳುಭಾವ ಮೂಡಿದೆ. ಮರುದಿನ ರಮೇಶ ಕೆಲಸಕ್ಕೆ ಹೊರಬಂದಾಗ ಎದುರಾದ ಭಾಮಾ ಮಾತಾಡದೆ ತಾತ್ಸಾರದಿಂದ ಮುಖ ತಿರುವಿದ್ದಾಳೆ. ಇದರಿಂದ ರಮೇಶ ಗಲಿಬಿಲಿಗೊಂಡಿದ್ದಾನೆ. ಇತ್ತ ಭಾಮಾ ತನ್ನ ಗೆಳತಿಯ ಭಾವನೆಯ ಭಾರವನ್ನು ತನ್ನೊಳಗೆ ಇಟ್ಟುಕೊಳ್ಳಲಾರದೆ ತನ್ನ ಗಂಡ ಭೀಮನ ಮುಂದೆ ಗುಟ್ಟಾಗಿ ಹೇಳಿಕೊಂಡಿದ್ದಾಳೆ. ಭೀಮ ರಮೇಶ ಇಬ್ಬರೂ ಸ್ನೇಹಿತರು. ರಮೇಶನ ಬಗೆಗೆ ಅವನಿಗೆ ಸಹಾನುಭೂತಿಯಿದ್ದು ಅವನ ಕುಡಿತದ ಕಾರಣ ಬಹುಶ: ರಮಾಳೇ ಇರಬೇಕು ಎಂದು ಸಂದೇಹಪಡುತ್ತಾನೆ. ಅಷ್ಟೇ ಅಲ್ಲ, ರಮಾ ಭಾಮಾಳಿಗೆ ತಿಳಿಸಿದ್ದು, ಅದರಿಂದ ಭಾಮಾಳ ತಲೆಕೆಡಿಸಿದುದರ ಔಚಿತ್ಯವನ್ನು ಪ್ರಶ್ನಿಸುತ್ತಾನೆ. ಇದರಿಂದ ಭಾಮಾ ಅಸಮಾಧಾನಗೊಂಡಾಗ ಆಕೆಯನ್ನು ಪ್ರಸನ್ನಗೊಳಿಸಲು ರಮೇಶನ ಜೊತೆ ಮಾತಾಡಬೇಕು ಎಂದು ಅನಿವಾರ್ಯ ನಿರ್ಧಾರ ತೆಗೆದುಕೊಳ್ಳುತ್ತಾನೆ. (ಗಮನಿಸಿ: ಭಾಮಾ–ಭೀಮರ ದಾಂಪತ್ಯದಲ್ಲಿ ರಮಾ ಮೂರನೆಯವಳಾಗಿ ಒಂದು ತ್ರಿಕೋನವಾಗುತ್ತಿದೆ.) ರಮೇಶನ ಜೊತೆ ಏನೆಂದು ಮಾತಾಡಬೇಕು? ಯಾಕೆ ಕುಡಿಯುತ್ತೀಯಾ ಅಂತ ಕೇಳಿದರೆ, ನೀನೂ ನಾನೂ ಇಬ್ಬರೂ ಕುಡಿದಿದ್ದು ಇದೆಯಲ್ಲವೆ ಎಂದು ಹೀಗಳೆಯುವಂತೆ ನಕ್ಕುಬಿಟ್ಟರೆ? ನೀನು ಕುಡಿತ ಹೆಚ್ಚು ಮಾಡಿದ್ದೀಯಾ ಅಂತ ನಿನ್ನ ಹೆಂಡತಿ ನನ್ನ ಹೆಂಡತಿಗೆ ಹೇಳಿದ್ದಾಳೆ ಎಂದರೆ? ಹಾಗೆಂದರೆ ರಮಾ ಮನೆಸುದ್ದಿಯನ್ನು ಎಲ್ಲರೆದುರು ಡಂಗುರ ಸಾರುತ್ತಾಳೆ ಎಂದು ಅವಳನ್ನು ಇನ್ನಷ್ಟು ದ್ವೇಷಿಸುತ್ತಾನೆ – ಆಗ ರಮಾ ಭಾಮಾಳಿಗೆ ಹೇಳಿ ಹೆಂಡತಿಯ ಕೈಯಿಂದ ಮೂತಿ ತಿವಿಸಿಕೊಳ್ಳಬೇಕಾಗುತ್ತದೆ. ಬುದ್ಧಿ ಹೊಳೆಯದೆ ಕೊನೆಗೆ ರಮೇಶ ಅಮಲಿನಲ್ಲಿ ಇರುವಾಗ ಹಿಡಿದು ಮಾತಾಡಿಸಬೇಕು ಎಂದುಕೊಂಡು, ಒಂದು ರಾತ್ರಿ ಒಂಬತ್ತಕ್ಕೆ ಅವನ ಮನೆಯಲ್ಲಿ ಕುಳಿತು ಹಾದಿಕಾಯುತ್ತ ಕ್ರಮೇಣ ತೂಕಡಿಸುತ್ತಾನೆ. ಆ ರಾತ್ರಿ ರಮೇಶ ಹನ್ನೊಂದು ಗಂಟೆಗೆ ಮನೆಯಲ್ಲಿ ಕಾಲಿಡುತ್ತಾನೆ. ತನ್ನ ಮನೆಯಲ್ಲಿ, ಆ ಸಮಯದಲ್ಲಿ ತನ್ನ ಸ್ನೇಹಿತ ಮಲಗಿ ಎದ್ದಿರುವುದನ್ನು ಕಂಡು ಅವನನ್ನು ವಿಚಿತ್ರವಾಗಿ ನೋಡುತ್ತ ಇವನೇಕೆ ಇಲ್ಲಿ ಎನ್ನುವಂತೆ ಹೆಂಡತಿಯನ್ನು ನೋಡುತ್ತಾನೆ. ಆಗ ಗಲಿಬಿಲಿಗೊಂಡ ಭೀಮ ಇದು ಸಕಾಲವಲ್ಲವೆಂದು ನಿರ್ಧರಿಸಿ, ಏನೋ ಸಬೂಬು ಹೇಳಿ ಕಾಲ್ತೆಗೆಯುತ್ತಾನೆ. ಹೆಂಡತಿಯ 'ಈ ಚಾಳಿಯನ್ನು ಕಣ್ಣಾರೆ ಕಂಡು' ರಮೇಶ ತಲೆಕೆಟ್ಟು ಕುಡಿತ ಹೆಚ್ಚು ಮಾಡುತ್ತಾನೆ. ಇತ್ತ ಭೀಮನ ಮಂತ್ರ ಅವನಿಗೇ ಮುಳುವಾಗಿದ್ದನ್ನು ಭಾಮಾ ತಿಳಿದು ಗಂಡನನ್ನು ತರಾಟೆಗೆ ತೆಗೆದುಕೊಳ್ಳುತ್ತಾಳೆ. (ಗಮನಿಸಿ: ಭೀಮ–ಭಾಮಾ–ರಮೇಶ ತ್ರಿಕೋನೀಕರಣ). ಭೀಮ ರಮೇಶನನ್ನು ಸುಧಾರಿಸಲು ಪಣತೊಟ್ಟು, ಅವನು ಕೆಲಸಮಾಡುವ ಕಾರ್ಖಾನೆಯ ಮಾಲೀಕನನ್ನು (ಅವನು ಭೀಮನ ಸೋದರ ಸಂಬಂಧಿ) ಭೇಟಿಮಾಡಿ ರಮೇಶನಿಗೆ ಒಂದು ಮಾತು ಹೇಳಲು ವಿನಂತಿಸಿ ಕೊಳ್ಳುತ್ತಾನೆ. ರಮೇಶ ಮರುದಿನ ಕಾರ್ಖಾನೆಗೆ ತಡವಾಗಿ ಹೋಗಿ ಕೆಲಸದಲ್ಲಿ ತಪ್ಪು ಮಾಡಿದಾಗ, ಅದನ್ನೇ ಮುಂದಿಟ್ಟುಕೊಂಡು ಮಾಲೀಕ ಅವನ ಮೇಲೆ ಹರಿಹಾಯ್ದು, ಕುಡಿತದ ಬಗೆಗೆ ಬುದ್ಧಿವಾದ ಹೇಳುತ್ತಾನೆ. ಆಗ ರಮೇಶ ಕುಡಿಯುವುದು ತನ್ನ ವೈಯಕ್ತಿಕ ವಿಷಯವೆಂದೂ, ಮಾಲೀಕನಿಗೂ ಅದಕ್ಕೂ ಸಂಬಂಧವಿಲ್ಲವೆಂದೂ ಘೋಷಿಸುತ್ತಾನೆ. ಮಾತಿಗೆ ಮಾತು ಬೆಳೆದು ಬಿಸಿ ಹೆಚ್ಚಾಗಿ ರಮೇಶ ಕೆಲಸಕ್ಕೆ ರಾಜೀನಾಮೆ ಕೊಟ್ಟು ಹೊರನಡೆಯುತ್ತಾನೆ. ದಾರಿಯಲ್ಲಿ ಎಚ್ಚರ ತಪ್ಪುವ ತನಕ ಕುಡಿಯುತ್ತಾನೆ. ಬೀದಿಯಲ್ಲಿ ಬಿದ್ದ ಅವನನ್ನು ಭೀಮನ ಸಹಾಯದಿಂದ ಆಸ್ಪತ್ರೆ ಸೇರಿಸಿದ ರಮಾ ಇನ್ನಷ್ಟು ಕಂಗೆಡುತ್ತಾಳೆ. ಆಸ್ಪತ್ರೆಯಲ್ಲಿ ಭೀಮ ರಮಾ ಒಟ್ಟಿಗಿರುವುದನ್ನು ಕಂಡು ರಮೇಶನ ಕೋಪ ಇನ್ನಷ್ಟು ನೆತ್ತಿಗೇರುತ್ತದೆ. ಇಲ್ಲಿಂದಲೇ ಅವರು ನ್ಯಾಯಾಲಯದ ಕಟ್ಟೆ ಹತ್ತಿದ್ದಾರೆ. ರಮೇಶ ಮದ್ಯವ್ಯಸನಿ ಆಗಿದ್ದಾನೆಂದೂ, ರಮಾ ಹೊರಸಂಬಂಧ ಇಟ್ಟುಕೊಂಡಿದ್ದಾಳೆ ಎಂದೂ ಇಬ್ಬರ ವಕೀಲರು ವಾದ ಮುಂದಿಟ್ಟಿದ್ದಾರೆ. ಇತ್ತ ತಾನು ಕೆಲಸ ಕಳೆದುಕೊಳ್ಳಲು ಭೀಮನೇ ಕಾರಣ ಎಂದು ರಮೇಶ ಭೀಮನ ಮೇಲೆ ಕತ್ತಿ ಮಸೆಯುತ್ತಿದ್ದಾನೆ.

ಇಲ್ಲಿ ತ್ರಿಕೋನಗಳು ಎಷ್ಟಿವೆ? ರಮೇಶ– ರಮಾ– ಭಾಮಾ; ರಮಾ– ಭಾಮಾ– ಭೀಮ; ಭೀಮ– ರಮಾ– ರಮೇಶ; ಭೀಮ– ಮಾಲೀಕ– ರಮೇಶ; ಭೀಮ– ರಮಾ– ರಮೇಶ; ರಮಾ– ರಮೇಶ– ವಕೀಲರು... ಸಾಕಾಗದ್ದಕ್ಕೆ ಭೀಮ– ಭಾಮಾ ಇವರ ಭಾವಬಂಧದ ಮೇಲೆ ರಮೇಶ ಹಾಗೂ ರಮಾ ಇಬ್ಬರೂ ಮೂರನೆಯವರಾಗಿ ಪ್ರತ್ಯೇಕ ಪ್ರಭಾವ ಬೀರುತ್ತಿದ್ದಾರೆ! ಇಷ್ಟೊಂದು ತ್ರಿಕೋನಗಳು ಒಂದಕ್ಕೊಂದು ತಳಕು ಹಾಕಿಕೊಂಡು ದಾಂಪತ್ಯದ ಭಾವಬಂಧದ ಮೇಲೆ ಎಡೆಬಿಡದೆ ದಾಳಿ ನಡೆಸುವಾಗ ದಾಂಪತ್ಯಕ್ಕೆ ಎಷ್ಟು ಪೆಟ್ಟಾಗಬಹುದು ಎಂಬುದು ಯಾರ ಊಹೆಗೂ ನಿಲುಕುವ ವಿಷಯ. ಅನೇಕ ದಾಂಪತ್ಯಗಳು– ಗಂಡಹೆಂಡಿರನ್ನು ಅವರಷ್ಟಕ್ಕೆ ಅವರನ್ನು ಬಿಟ್ಟರೆ ಹೊಂದಾಣಿಕೆ ಸಾಧ್ಯವಾಗುವ ಸಂಭವವಿದ್ದರೂ– ಬಹುತ್ರಿಕೋನೀಕರಣದ ಕಾರಣಕ್ಕಾಗಿ ಮುರಿದುಹೋಗಿವೆ.

ತ್ರಿಕೋನೀಕರಣದ ಆಘಾತವನ್ನು ಮುಂದಿನ ಸಂಚಿಕೆಯಲ್ಲಿ ನೋಡೋಣ.

'ಸಮೃದ್ಧ ದಾಂಪತ್ಯ' ಕನ್ನಡದಲ್ಲಿ ಕಾರ್ಯಾಗಾರವನ್ನು ಬೆಂಗಳೂರಿನಲ್ಲಿ ಜು.25–26ರಂದು ಹಮ್ಮಿಕೊಂಡಿದ್ದೇನೆ. ದಂಪತಿಗಳಿಗೆ ಆದ್ಯತೆ. ಗರಿಷ್ಠ ಸಂಖ್ಯೆ 30 ಮಾತ್ರ. ಆಸಕ್ತರು ಜು.16ರ ಒಳಗೆ ಸಂಪರ್ಕಿಸಿ. ದೂ: 8494922888.)

ದಾಂಪತ್ಯದ ಬಗೆಗೆ ನಿಮ್ಮ ಅನಿಸಿಕೆ, ಸಮಸ್ಯೆಗಳನ್ನು ಸುಖೀ ದಾಂಪತ್ಯ ವಿಭಾಗ, ನಂ. 75, ಎಂ. ಜಿ. ರಸ್ತೆ, ಬೆಂಗಳೂರು 01 ಇಲ್ಲಿಗೆ ಕಳುಹಿಸಿ. ದಾಂಪತ್ಯ ಸಮಸ್ಯೆಗಳಿಗೆ ಉಚಿತ ಸಹಾಯವಾಣಿ 8494944888 ಗೆ ಪ್ರತಿ ಶುಕ್ರವಾರ ಮಧ್ಯಾಹ್ನ 2ರಿಂದ 4ರ ತನಕ ಕರೆಮಾಡಿ. ಲೇಖಕರ ವಿಳಾಸ: .www.medisex.org